ಸಾಕ್ಷಿಯ ಹೆಸರುಃ | ಚಂದ್ರಕಾಂತ ಸಿದ್ಧರಕರ
ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 9-8-2016

ಮುಂದುವರೆದ ಮುಖ್ಯ ವಿಚಾರಣೆ- ಶ್ರೀ ಜಿ ಟಿ ಎನ್ ವಕೀಲರಿಂದಃ-

ನಾನು ಈ ದಾವೆಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿದ್ದೇನೆ.

**ಪಾಟೀ ಸವಾಲುಃ-** ಶ್ರೀ ಕೆ ಆರ್ ಡಿ ವಕೀಲರಿಂದಃ

ನಾನು 25 ವರ್ಷಗಳಿಂದ ನಂದನಗದ್ದಾಕ್ಕೆ ಹೋಗಿ ಬಂದು ಮಾಡುತ್ತಿದ್ದೆ. ಈಗ 4 ವರ್ಷಗಳಿಂದ ಖಾಯಂವಾಗಿ ವಾಸವಾಗಿದ್ದೇನೆ. ನನ್ನ ಮಕ್ಕಳ ವಿದ್ಯಾಭ್ಯಾಸ ನಂದನಗದ್ದಾದಲ್ಲಿಯೇ ಆಗಿದೆ. ನಾನು ಸಿದ್ಧರಕರ ಇದ್ದ ಬಗ್ಗೆ ಮತದಾರರ ಚೀಟಿ ಮತ್ತು ರೇಶನ್ ಕಾರ್ಡನ್ನು ಹಾಜರ ಪಡಿಸುತ್ತೇನೆ. ದಾವಾ ಜಮೀನಿನ ಸರ್ವೆ ನಂ. 210. ನನಗೆ ಸದರಿ ಜಮೀನಿನ ಚೆಕ್‌ಬಂದಿ ಗೊತ್ತಿಲ್ಲ. ನಾನು ವೈಯಕ್ತಿಕವಾಗಿ ಸದರಿ ಜಮೀನಿಗೆ ಭೆಟ್ಟಿ ನೀಡಿಲ್ಲ. ವಾದಿ ಪ್ರತಿವಾದಿಯರ ಕುಟುಂಬದಲ್ಲಿ ನಾನು ದಾಯಾದಿ ಅಲ್ಲ. ಮತ್ತು ದಾವಾ ಆಸ್ತಿಯಲ್ಲಿ ನನಗೆ ಯಾವುದೇ ವಾರಸಾ ಹಕ್ಕು ಇಲ್ಲ. ದಾವಾ ಆಸ್ತಿ ಮೊದಲು ವಾದಿಯ ತಂದೆಯಾದ ಸೈರೋಬಾ ಆಪಾ ಗುರವ ಅವರ ಹೆಸರಿಗೆ ಇತ್ತು. ಅದರ ಮಾಲೀಕರಾರೆಂದು ನನಗೆ ಗೊತ್ತಿಲ್ಲ. ವಾದಿಯ ಅಜ್ಜನ ಹೆಸರು ಆಪಾ. ಆತನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ವಾದಿಯ ಅಜ್ಜನಿಗೆ ನೋಡಿಲ್ಲ. ವಾದಿಯ ಅಜ್ಜ ಸಾಗುವಳಿ ಮಾಡುತ್ತಿದ್ದ ಎಂದು ನನಗೆ ವಾದಿಯ ತಂದೆ ಹೇಳಿದ್ದರಿಂದ ಗೊತ್ತು. ನನಗೆ ಆ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಆ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರನಲ್ಲ ಎಂದರೆ ಸರಿ. ವಾದಿಯ ತಂದೆ ನನಗೆ ವಾದಿಯ ಅಜ್ಜ ಸಾಗುವಳಿ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಂದು ಕುಟುಂಬಗಳಲ್ಲಿ ಮುಖ್ಯಸ್ಥನೊಂದಿಗೆ ಆತನ ಕುಟುಂಬದ ಸದಸ್ಯರು ವಾಸವಾಗಿರುತ್ತಾರೆ ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿಯ ಗಂಡ ನೌಕರಿಯಲ್ಲಿದ್ದಾಗ ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ. ಬೇರೆ ಬೇರೆ ಕಡೆ ನೌಕರಿ ಮಾಡಿದ್ದಾರೆಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಆವಾಗ ಆವಾಗ ತನ್ನ ತಂದೆ ಮನೆಗೆ ಬಂದು ಹೋಗುತ್ತಿದ್ದರು. ದಾವಾ ಜಮೀನನ್ನು ವಾದಿಯ ತಂದೆ ಗೇಣಿದಾರರಿಂದ ಪಡೆದು ಸ್ವತಃ ಸಾಗುವಳಿ ಮಾಡುತ್ತಾ ಬಂದಿದ್ದರು ಎಂದರೆ ಸರಿ. ವಿಲ್‌ನಾಮೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಅದನ್ನು ಬರೆಸುವಾಗ ನಾನು ಹಾಜರ ಇರಲಿಲ್ಲ. ಸೈರೋಬಾ ವಿಲ್‌ನಾಮೆ ಎಲ್ಲಿ ಮತ್ತು ಯಾರಿಂದ ಮತ್ತು ಯಾವ ಮಾಹಿತಿ ನೀಡಿ ಬರೆಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ವಿಲ್‌ನಾಮೆ ನೋಡಿಲ್ಲ, ಆದರೆ ನನಗೆ

ಸೈರೋಬಾ ಹೇಳಿದ್ದರಿಂದ ಮಾಹಿತಿ ಇದೆ. ನನಗೆ ಸೈರೋಬಾ ಹೇಳಿದ್ದ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆ ಬಗ್ಗೆ ಹೇಳಿದ ನಂತರ ನಾನು ವಿಲ್‌ನಾಮೆ ರದ್ದುಪಡಿಸಲು ಹೇಳಿದ್ದೆ. ನನಗೆ ಆ ರೀತಿ ಹೇಳುತ್ತಿದ್ದಾಗ ಸೈರೋಬಾ ಮೃತಿಭ್ರಷ್ಟನಾಗಿದ್ದಾ. ಆತನ ನನಗೆ ವಿಲ್‌ವಾಮೆ ರದ್ದು ಪಡಿಸಲು ಹೇಳಿಲ್ಲ. ಆ ಸಮಯದಲ್ಲಿ ಅವನಿಗೆ ಎನು ಎಂದು ಗೊತ್ತಾಗುತ್ತಿರಲಿಲ್ಲ. ಸೈರೋಬಾ ಮೃತ ಪಡುವ 2-3 ವರ್ಷಗಳ ಮುಂಚೆ ನನಗೆ ವಿಲ್‌ನಾಮೆ ಬಗ್ಗೆ ಹೇಳಿದ್ದ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ನನ್ನ ಮತ್ತು ವಾದಿಯ ಮದ್ಯೆ ದೇವಸ್ಥಾನಕ್ಕೆ ಸಂಬಂದಪಟ್ಟಂತೆ ವೈಮನಸ್ಸು ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ಜಡ್ಜ ಕಾರವಾರ